ಒಎಸ್ ಸಂ.ಃ270/2016
ಪಿಡಬ್ಲ್ಯೂ ಃ 1
ದಿ:10-07-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ</u>

ನಾನು, ನನ್ನ ಅಣ್ಣ ನಾರಾಯಣಸ್ವಾಮಿ ಹಾಗೂ ನಮ್ಮ ತಾಯಿ ಚಿನ್ನಕ್ಕ ಈ ಕೇಸನ್ನು ಹಾಕಿರುತ್ತೇವೆ. ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಆಗ ನನ್ನ ಅಣ್ಣ ಮತ್ತು ತಾಯಿ ಅಲ್ಲಿಗೆ ಬಂದಿದ್ದರು. ವಾದ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ. ವಾದಪತ್ರಕ್ಕೆ ನನ್ನ ಅಣ್ಣನಾಗಲೀ ಮತ್ತು ತಾಯಿಯಾಗಲೀ ಸಹಿ ಮಾಡಿರುವುದಿಲ್ಲ. ನನ್ನ ಅಣ್ಣನಾಗಲೀ ಅಥವಾ ನಮ್ಮ ತಾಯಿಯಾಗಲೀ ವಕೀಲರಿಗೆ ಮಾಹಿತಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಮತ್ತು ನಮ್ಮ ತಾಯಿ ವಕೀಲರಿಗೆ ವಕಾಲತ್‌ನಾಮೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಾಹಿತಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಾನು ಎಸ್‌ಎಸ್‌ಎಲ್‌ಸಿ ಮುಗಿದ ನಂತರ ಬೇವಳ್ಳಿಯಲ್ಲಿ ವಾಸವಿರಲಿಲ್ಲ ಬೆಂಗಳೂರಿನಲ್ಲಿ ವಾಸವಿದ್ದೆ ಎಂದರೆ ಸರಿಯಲ್ಲ. ನಿಪಿ 1 ಮತ್ತು 2ನ್ನು ನಾನು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ನಾನು ಅರ್ಜಿ ಕೊಟ್ಟ ನಂತರ ಗ್ರಾಮಲೆಕ್ಕಾಧಿಕಾರಿಯಾಗಲೀ ಅಥವಾ ಯಾವುದೇ ಅಧಿಕಾರಿಯಾಗಲೀ ನಮ್ಮ ಗ್ರಾಮಕ್ಕೆ ಭೇಟಿ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಅವರು ಬಂದಾಗ ನಾನು ನಮ್ಮ ಕುಟುಂಬದ ಪಡಿತರ ಚೀಟಿಯನ್ನು ಕೊಟ್ಟಿರುತ್ತೇನೆ. ನಾನು ಪಡಿತರ ಚೀಟಿಯ ಪ್ರತಿಯನ್ನು ಕೊಟ್ಟಿರುತ್ತೇನೆ. ಚಂಗಪ್ಪ ರವರ ಊರು ಅಗರ ಆಗಿರುತ್ತದೆ. ಚಂಗಪ್ಪರವರು ಅಗರದಿಂದ ಬೇವಳ್ಳಿಗೆ ಬರಲು ಕಾರಣವೇನು ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಆಗ ಹುಟ್ಟಿರಲಿಲ್ಲ ಆದ್ದರಿಂದ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಕೊಂಡಕ್ಕರವರನ್ನು ನಾನು ನೋಡಿರುವುದಿಲ್ಲ. ನನಗೆ ಬುದ್ಧಿ ಬಂದ ನಂತರ ಕೊಂಡಕ್ಕರವರ ಗಂಡ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕೊಂಡಕ್ಕರವರ ತಂದೆ ಮುನಿಯಪ್ಪರವರನ್ನು ನೋಡಿರುವುದಿಲ್ಲ. ಮುನಿಯಪ್ಪನಿಗೆ ಯಾವ ಯಾವ ಜಮೀನುಗಳು ಇದ್ದವು ಎಂದು ನನಗೆ ಮಾಹಿತಿ ಇರುವುದಿಲ್ಲ. ಏಕೆಂದರೆ ನಾನು ಚಿಕ್ಕ ವಯಸ್ಸಿನಲ್ಲಿರುವಾಗಲೇ ಅವರು ತೀರಿಕೊಂಡಿರುತ್ತಾರೆ. ದೊಡ್ಡಮುನಿಸ್ವಾಮಿ, ಚಿಕ್ಕಮುನಿಸ್ವಾಮಿ ಹಾಗೂ ಕೊಂಡಕ್ಕ ಇವರು ಯಾವಾಗ ವಿಭಾಗ ಮಾಡಿಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ. ಆ ವಿಭಾಗದಲ್ಲಿ ಕೊಂಡಕ್ಕನಿಗೆ ಯಾವ ಯಾವ ಆಸ್ತಿಗಳು ಬಂದವು ಎಂದು ನನಗೆ ಗೊತ್ತಿರುವುದಿಲ್ಲ. ಕೊಂಡಕ್ಕನ

ಹೆಸರಿಗೆ ಯಾವ ಯಾವ ಜಮೀನುಗಳು ಇವೆ ಎಂದು ತಿಳಿದುಕೊಂಡಿರುವುದಿಲ್ಲ ಹಾಗೂ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ವಾದ ಪತ್ರದಲ್ಲಿ ಕೊಂಡಕ್ಕ ತೀರಿಕೊಂಡ ನಂತರ ಪಾಲು ತೆಗೆದುಕೊಂಡಿರುವುದಾಗಿ ತಿಳಿಸಿರುವುದಿಲ್ಲ. ಮುನಿಯಪ್ಪ ತೀರಿಕೊಂಡ ನಂತರ ದೊಡ್ಡಮುನಿಸ್ವಾಮಿ, ಚಿಕ್ಕಮುನಿಸ್ವಾಮಿ ಹಾಗೂ ಕೊಂಡಕ್ಕ ಇವರು ಪಾಲು ಮಾಡಿಕೊಂಡಿರುತ್ತಾರೆ ಎಂದು ವಾದ ಪತ್ರದಲ್ಲಿ ತಿಳಿಸಿರುತ್ತೇವೆ. ಯಾರು ಯಾರಿಗೆ ಎಷ್ಟು ಪಾಲು ಬಂದಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಕೊಂಡಕ್ಕ ಇವರ ಹೆಸರಿನಲ್ಲಿ ಯಾವುದೇ ಪಹಣಿಗಳು ಬಂದಿರುವುದಿಲ್ಲ. ಮುನಿಯಪ್ಪನಿಗೆ ಯಾವುದೇ ಆಸ್ತಿಗಳು ಇರುವುದಿಲ್ಲ ಆದ್ದರಿಂದ ಕೊಂಡಕ್ಕನಿಗೆ ಯಾವುದೇ ಆಸ್ತಿಗಳು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಕೊಂಡಕ್ಕ ಮತ್ತು ಅವರ ಗಂಡ ಚಂಗಪ್ಪ ಮತ್ತು ಅವರ ಮಕ್ಕಳು ಅವರೆಲ್ಲಾ ಒಟ್ಟಿಗೆ ಇದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಂಡಕ್ಕನಿಗೆ ಯಾವುದೇ ಅಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಕೊಂಡಕ್ಕನ ಹೆಸರಿನಲ್ಲಿ ಯಾವುದೇ ಪಹಣಿ ಇರುವುದಿಲ್ಲ. ಚಂಗಪ್ಪನ ಹೆಸರಿಗೆ ಯಾವುದೇ ಅಸ್ತಿಗಳು ಇರುವುದಿಲ್ಲ. ಕೊಂಡಕ್ಕ ಮತ್ತು ಚಂಗಪ್ಪ ತೀರಿಕೊಂಡ ನಂತರ ಅವರ ದೊಡ್ಡ ಮಗ ಸಂಸಾರ ನೋಡಿಕೊಳ್ಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಕೊಂಡಕ್ಕ ಕೆಲವು ಆಸ್ತಿಗಳನ್ನು ಒಟ್ಟು ಕುಟುಂಬದ ಅಸ್ತಿಯಿಂದ ಖರೀದಿ ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೊಂಡಕ್ಕನ ಹೆಸರಿನಲ್ಲಿ ಯಾವುದೇ ಅಸ್ತಿಗಳು ಇರುವುದಿಲ್ಲ ಆದ್ದರಿಂದ ನನಗೆ ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ. ಸುಬ್ಬಣ್ಣ 1992 ರಲ್ಲಿ ತೀರಿಕೊಂಡಿರುತ್ತಾರೆ. ಅವರು ದಿನಾಂಕ 30.10.1991 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಇರಬಹುದು ಆಗ ನಾನು ಚಿಕ್ಕ ಪ್ರಾಯದವನಾಗಿದ್ದೆ. ವಾದಿ ಮತ್ತು ಪ್ರತಿವಾದಿಯವರ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ ಮತ್ತು ವಿದ್ಯುತ್ ಬಿಲ್‌ಗಳು ಎಲ್ಲವೂ ಪ್ರತ್ಯೇಕ ಪ್ರತ್ಯೇಕವಾಗಿ ಇರುತ್ತವೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲಿ ಇದ್ದಾರೆ ಎಂದು ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ದಾಖಲಾತಿಗಳು ಇವೆ ಎಂದು ಹೇಳುತ್ತಾರೆ. ದಾಖಲಾತಿಗಳು ಬೇರೆ ಬೇರೆಯಾಗಿ ಇವೆ ಎಂದರೆ ಸಾಕ್ಷಿ ಈಗ ಬೇರೆ ಬೇರೆ ಇರಬಹುದು ಆದರೆ ಹಿಂದೆ ಒಂದೇ ಇದ್ದವು ಎಂದು ಹೇಳುತ್ತಾರೆ. ನಮ್ಮ ಮನೆಯ ವಿದ್ಯುತ್ ಬಿಲ್ ಬೇರೆ ಬರುತ್ತಿದೆ ಎಂದರೆ ಸರಿಯಲ್ಲ. ಸುಬ್ಬಣ್ಣನವರ ಚಿನ್ನದ ಒಡವೆಗಳನ್ನು ಮಾರಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಆ ಒಡವೆಗಳನ್ನು ಯಾವಾಗ ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಆ ಆಭರಣಗಳನ್ನು ಧರಿಸುತ್ತಿದ್ದರು ಎಂದು ಹೇಳುತ್ತಾರೆ. ಯಾವುದೇ ಒಡವೆಗಳು ಇಲ್ಲದೇ ಇದ್ದರೂ ಕೂಡ ನಾನು ಸೃಷ್ಠಿಸಿ ವಾದ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾವಾಗಲೀ ಪ್ರತಿವಾದಿಯವರಾಗಲೀ ಯಾವತ್ತೂ ಸಹ ಒಟ್ಟು ಕುಟುಂಬದಲ್ಲಿ ವಾಸವಾಗಿರಲೇ ಇಲ್ಲ ಎಂದರೆ ಸರಿಯಲ್ಲ. ನಾವು ಒಟ್ಟು ಕುಟುಂಬದಲ್ಲಿ ಇಲ್ಲದೇ ಇರುವುದರಿಂದ ವಾದ ಪತ್ರಕ್ಕೆ ನಾನು ಒಬ್ಬನೇ ಸಹಿ ಮಾಡಿದ್ದು ನನ್ನ ಅಣ್ಣನಾಗಲೀ ಅಥವಾ ನಮ್ಮ ತಾಯಿಯಾಗಲೀ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.